I/475898/2023

**ಕರ್ನಾಟಕ ಸರ್ಕಾರ**
**ಅರಣ್ಯ ಇಲಾಖೆ**
**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಹಾಗೂ ಆಯ್ಕೆ ಪ್ರಾಧಿಕಾರ ರವರ ಕಛೇರಿ, ಅರಣ್ಯ ಭವನ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-03.**

## 110 ವಲಯ ಅರಣ್ಯಾಧಿಕಾರಿ ಹುದ್ದೆಗಳಿಗೆ ನೇರ ನೇಮಕಾತಿ
## ಅಧಿಸೂಚನೆ ಸಂಖ್ಯೆ: ಬಿ9/ವಅಅ/ವಿವ-05/2014-15 ದಿನಾಂಕ: 29.10.2014

## ಪ್ರಕಟಣೆ

ಅರಣ್ಯ ಇಲಾಖೆಯಲ್ಲಿ ಖಾಲಿ ಇರುವ 110 ವಲಯ ಅರಣ್ಯಾಧಿಕಾರಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರದ ಪತ್ರ ಸಂಖ್ಯೆ: ಅಪಜೀ 181 ಅಅಸೇ 2012 ದಿನಾಂಕ: 19.01.2013 ಮತ್ತು ಸರ್ಕಾರದ ಪತ್ರ ಸಂಖ್ಯೆ: ಅಪಜೀ 005 ಅಅಸೇ 2014 ದಿನಾಂಕ: 07.07.2014ರಲ್ಲಿ ಅನುಮತಿಯನ್ನು ನೀಡಿರುತ್ತದೆ. ಅದರಂತೆ ಈ ಕಛೇರಿ ಅಧಿಸೂಚನೆ ಸಂಖ್ಯೆ: ಬಿ9/ವಅಅ/ವಿವ-5/2014-15 ದಿನಾಂಕ: 29.10.2014ರಲ್ಲಿ 110 ವಲಯ ಅರಣ್ಯಾಧಿಕಾರಿಗಳ ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮದ ಅಧಿಸೂಚನೆ ಸಂಖ್ಯೆ: ಅಪಜೀ 366 ಅಪಸೇ 2010 ದಿನಾಂಕ: 06.09.2012 [Karnataka Forest Department Service (Recruitment) (Amendment) Rules 2012]ರ ನಿಯಮಗಳಂತೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

ಕರ್ನಾಟಕ ಅರಣ್ಯ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ವಲಯ ಅರಣ್ಯಾಧಿಕಾರಿ ಹುದ್ದೆಯ ನೇಮಕಾತಿ ಪ್ರಕ್ರಿಯೆಗಳನ್ನು ನಿಯಮಾನುಸಾರ ಪೂರ್ಣಗೊಳಿಸಿ, ಈ ಕಛೇರಿ ಪ್ರಕಟಣೆ ಸಂಖ್ಯೆ: ಬಿ9/ವಅಅ/ವಿವ-5/2014-15 ದಿನಾಂಕ: 20.02.2016ರಲ್ಲಿ ಅಂತಿಮ ಆಯ್ಕೆ ಪಟ್ಟಿ ಹಾಗೂ ಕಾಯುವಿಕೆ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.

ಮುಂದುವರೆದು, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಇಲ್ಲಿ ರಿಟ್ ಅರ್ಜಿ ಸಂಖ್ಯೆ: 14697/2020 (S-KSAT) ಅಂತಿಮ ಆದೇಶದ ದಿನಾಂಕ: 08.06.2021 ಹಾಗೂ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಇಲ್ಲಿ ರಿಟ್ ಪಿಟೀಷನ್ ಸಂಖ್ಯೆ: 8634/2021 (S-KSAT) ಅಂತಿಮ ಆದೇಶದ ದಿನಾಂಕ: 16.06.2021ರನ್ವಯ ಹಾಗೂ ಸರ್ಕಾರದ ಪತ್ರ ಸಂಖ್ಯೆ: ಎಫ್‌ಇಇ 07 ಎಫ್‌ಎನ್‌ಜಿ 2022 ದಿನಾಂಕ: 05.11.2022ರಲ್ಲಿನ ನಿರ್ದೇಶದನ್ವಯ ಈ ಕೆಳಕಂಡ ಅಭ್ಯರ್ಥಿಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳು ಹಾಗೂ ನೇಮಕಾತಿ ಅಧಿಸೂಚನೆಯಲ್ಲಿನ ಷರತ್ತುಗಳಂತೆ **ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅರ್ಜಿಯಲ್ಲಿ ನಮೂದಿಸಿದ ಮಾಹಿತಿಯಂತೆ ಮೂಲ ದಾಖಲೆಗಳನ್ನು ದಿನಾಂಕ: 13.09.2023ರಂದು ಬೆಳಿಗ್ಗೆ 11.00 ಗಂಟೆಗೆ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಸಿಬ್ಬಂದಿ ಮತ್ತು ನೇಮಕಾತಿ)ರವರ ಮುಂದೆ, 4ನೇ ಮಹಡಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಇಲಾಖಾ ವಶ ನೀಡಲು ಸೂಚಿಸಿದೆ**.

1. ಶ್ರೀ ವಿನೋದ್ ಆರ್. ಪತ್ತಾರ – ನೋಂದಣಿ ಸಂಖ್ಯೆ: 50204
2. ಶ್ರೀ ಮಾರುತಿ ಗುರುವ – ನೋಂದಣಿ ಸಂಖ್ಯೆ: 50146

**ಸೂಚನೆ:**

1. *ನಿಗದಿತ ದಿನಾಂಕ ಮತ್ತು ಸಮಯದಂದು ಮೂಲ ದಾಖಲೆಗಳನ್ನು ಇಲಾಖಾ ವಶ ನೀಡಲು ತಪ್ಪಿದಲ್ಲಿ, ಅಭ್ಯರ್ಥಿಯ ಅಭ್ಯರ್ಥಿತ್ವ ಸ್ವಯಂ ಚಾಲಿತವಾಗಿ ರದ್ದಾಗುತ್ತದೆ ಹಾಗೂ ಈ ಕುರಿತು ಯಾವುದೇ ರೀತಿಯ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.*
2. *ಅರಣ್ಯ ಇಲಾಖೆಯ ಅಧಿಕೃತ ವೆಬ್‌ಸೈಟ್ https://aranya.gov.in/ ರಲ್ಲಿ ನೇಮಕಾತಿ (Recruitment) ಶೀರ್ಷಿಕೆಯಡಿ ಪ್ರಕಟಿಸಲಾಗುತ್ತಿರುವ ಮಾಹಿತಿಯನ್ನು ಅಭ್ಯರ್ಥಿಗಳು ಕಾಲ ಕಾಲಕ್ಕೆ ವೀಕ್ಷಿಸುವುದು. ಇದಕ್ಕಾಗಿ ಬೇರೆ ಯಾವುದೇ ಪತ್ರ ವ್ಯವಹಾರ ಮಾಡಲಾಗುವುದಿಲ್ಲ.*

**Signed by Rajiv Ranjan, Ifs**
**Date: 29-08-2023 16:24:49**

ದಿನಾಂಕ: 29.08.2023

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)
ಹಾಗೂ **ಆಯ್ಕೆ ಪ್ರಾಧಿಕಾರ**